ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,
ಶ್ರೀರಂಗಪಟ್ಟಣ

ಸಿ.ಸಿ. 586/2021

| | |
|---|---|
| ಸಿ.ಡಬ್ಲೂ ಃ | 3 |
| ಪಿ.ಡಬ್ಲೂ ಃ | 3 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನಿಂಗೇಗೌಡ |
| ತಂದೆ/ ಪತಿಯ ಹೆಸರು | ಃ | ಮುದ್ದೇಗೌಡ |
| ವಯಸ್ಸು | ಃ | 52 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಗೊಬ್ಬರಗಾಲ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 26.12.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಆರೋಪಿ ಪರಿಚಯ ಇರುತ್ತದೆ. ನನಗೆ ಚಾಸಾ-1 ಮತ್ತು 2 ರವರ ಪರಿಚಯ ಇರುತ್ತದೆ.

ಸುಮಾರು 5 ವರ್ಷದ ಹಿಂದೆ ಅರಕೆಗೆ ಗ್ರಾಮದಲ್ಲಿ ಅಪಘಾತ ಆಗಿರುತ್ತದೆ. ಸದರಿ ಅಪಘಾತದಲ್ಲಿ ಸ್ವಾಮಿ ಎಂಬುವವರಿಗೆ ಗಾಯಗಳಾಗಿರುತ್ತವೆ. ನಂತರ ನಾನು ಸ್ವಾಮಿರವರನ್ನು ಮಂಡ್ಯದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಕೆ ಮಾಡಿರುತ್ತೇನೆ. ನಾನು ಅಪಘಾತವನ್ನು ನೋಡಿರುತ್ತೇನೆ. ಸ್ವಾಮಿರವರು ಸೈಕಲ್ ನಲ್ಲಿ ಅರಕೆರೆಯಿಂದ ಗೊಬ್ಬರಗಾಲ ಕಡೆಗೆ ಹೋಗುತ್ತಿದ್ದು, ಆಗ KSRTC ಬಸ್ ಮೈಸೂರು ಕಡೆಯಿಂದ ಬರುತ್ತಿದ್ದು ಸೈಕಲ್ ಗೆ ಟಚ್ ಮಾಡಿರುತ್ತದೆ. ಆಗ ಸ್ವಾಮಿರವರಿಗೆ ಎಡಕೈ ಹಾಗೂ ಎಡಕಾಲಿಗೆ ಗಾಯಗಳಾಗಿರುತ್ತವೆ.

ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದು ಅಲ್ಲಿ ನನ್ನ ಸಮಕ್ಷಮ ಮಹಜರ್ ಮಾಡಿರುತ್ತಾರೆ. ಸಾಕ್ಷಿಗೆ ಈಗ ಮಹಜರ್ ಅನ್ನು ತೋರಿಸಿದ್ದು, ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಅನು 11.00 ಗಂಟೆಯಿಂದ 12.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರ್ ಸಂದರ್ಭದಲ್ಲಿ ನನ್ನ ಜೊತೆ ಮಾದೇಗೌಡರವರು ಸಹಾ ಇದ್ದರು. ಈ ಘಟನೆ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಪೊಲೀಸರು ಘಟನಾ ಸ್ಥಳದಲ್ಲಿ ಫೋಟೋವನ್ನು ತೆಗೆದುಕೊಂಡಿರುತ್ತಾರೆ .

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ಮಹಜರ್ ಮಾಡಲು ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ನಾನು ಗೊಬ್ಬರಗಾಲ ಗ್ರಾಮದ ವಾಸಿ ಎಂದರೆ ಸರಿ. ಅರಕೆರೆ ಗ್ರಾಮವು ಸಾಕಷ್ಟು ಜನಸಂದಣಿ ಇರುವ ಸ್ಥಳ ಎಂದರೆ ಸರಿ. ಅರಕೆರೆಯಿಂದ ಗೊಬ್ಬರಗಾಲಕ್ಕೆ ಬಸ್ ಸಂಚಾರ ಇಲ್ಲ ಎಂದರೆ ಸರಿ. ನೀವು ಇದ್ದ ಸ್ಥಳ ಯಾವುದು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅರಕೆರೆಯಲ್ಲಿರುವ ಗರಡಿ ಮನೆಯ ಸ್ವಲ್ಪ ಮುಂದುಗಡೆ ಎಂದು ನುಡಿಯುತ್ತಾರೆ. ಗರಡಿ ಮನೆಯಲ್ಲಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ.

ಅಪಘಾತ ಆದಾಗ ಗರಡಿ ಮನೆ ಬಳಿ ಇದ್ದ ಜನರು ಅಪಘಾತ ಸ್ಥಳಕ್ಕೆ ಬಂದಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತಾರೆ. ಅಲ್ಲಿ ಯಾರು ಯಾರು ಬಂದಿದ್ದರು ಎಂದು ನಿಮಗೆ ಗೊತ್ತಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅರಕೆರೆಯಿಂದ ಗೊಬ್ಬರಗಾಲ ಗ್ರಾಮಕ್ಕೆ 1 ಕಿ.ಮಿ ಅಂತರ ಇರುತ್ತದೆ.

ಗರಡಿ ಮನೆಯಿಂದ ಬಂದ ವ್ಯಕ್ತಿಗಳು ಸ್ವಾಮಿರವರನ್ನು ಉಪಚರಿಸಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅರಕೆರೆಯಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ . ನಾನು ಮೊದಲಿಗೆ ಅರಕೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವೈದ್ಯರು ಚಿಕಿತ್ಸೆ ನೀಡಿದ ನಂತರ ನಾನು ಸ್ವಾಮಿರವರನ್ನು ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅರಕೆರೆ ಆಸ್ಪತ್ರೆಯಲ್ಲಿ ವೈದ್ಯರು ಸಲಹಾ ಚೀಟಿ ನೀಡಿರುತ್ತಾರೆಯೆ ಎಂದರೆ ನನಗೆ ಗೊತ್ತಿಲ್ಲ.

ಅರಕೆರೆ ಆಸ್ಪತ್ರೆಯ ವೈದ್ಯರು ಇಲ್ಲಿ ಆಗುವುದಿಲ್ಲ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು

ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಸಲಹಾ ಚೀಟಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಸ್ವಾಮಿ ಸಂಬಂಧಿಕರಲ್ಲ.

ಆರೋಪಿಯ ಊರು ಶಾಂತಿ ಕೊಪ್ಪಲು ಇರುತ್ತದೆ ಎಂದರೆ ಸರಿ. ಮಹಜರ್ ಗೆ ನನ್ನ ಜೊತೆ ಮಹಾದೇವುರವರು ಸಹಿ ಮಾಡಿರುತ್ತಾರೆ. ಮಹಾದೇವುರವರು ಸಹಾ ನಮ್ಮ ಊರಿನವರೇ ಇರುತ್ತಾರೆ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಿನ ಸಾಕ್ಷಿ ಹೇಳಲು ನನ್ನನ್ನು ಸ್ವಾಮಿರವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸ್ವಾಮಿರವರು ಸ್ಥಳದಲ್ಲಿ ಕುಡಿದು ಬಿದಿದ್ದ ಕಾರಣ ಸುತ್ತಾ ಮುತ್ತಾ ಇರುವವರು ಉಪಚರಿಸಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸ್ವಾಮಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಫೋಟೋವನ್ನು ಫೋಟೋಗ್ರಾಫರ್ ರವರು ತೆಗೆದಿರುತ್ತಾರೆ. ಫೋಟೋಗ್ರಾಫರ್ ರವರು ಯಾವ ಊರಿನವರು ಎಂದು ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.